# ಹಿರಿಯ ಸ್ನೇಹಿ ಕರ್ನಾಟಕ - ನಮ್ಮ ಗುರಿ

**ಸಹಯೋಗ**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ

ಕರ್ನಾಟಕ ರಾಜ್ಯ ಹಿರಿಯ ನಾಗರೀಕರ ಸಂಪನ್ಮೂಲ ಕೇಂದ್ರ, ಕರ್ನಾಟಕ ಸರ್ಕಾರ

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ

## ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರೀಕರ ರಕ್ಷಣಾ ಕಾಯ್ದೆ, 2007– ಒಂದು ಪಕ್ಷಿನೋಟ.

2007 ರಿಂದ ಜಾರಿಗೆ ಬಂದಿರುವ ಈ ಕಾಯ್ದೆಯು ಮಕ್ಕಳು, ಮೊಮ್ಮಕ್ಕಳು ಹಾಗೂ ವಾರಸುದಾರರಿಗೆ ತಮ್ಮ ಪಾಲಕರನ್ನು ಹಾಗೂ ಹಿರಿಯ ನಾಗರೀಕರನ್ನು ಸಂರಕ್ಷಿಸುವ ಕಾನೂನುಬದ್ಧ ಜವಾಬ್ದಾರಿಯನ್ನು ನಿಗದಿಪಡಿಸಿದೆ. ಪಾಲಕರು ಹಾಗೂ ಹಿರಿಯ ನಾಗರೀಕರಿಗೆ ಜೀವನ ನಿರ್ವಹಣೆ ಹಾಗೂ ಆಸ್ತಿಯ ರಕ್ಷಣೆಗೆ ಸರಳವಾಗಿ, ತ್ವರಿತಗತಿಯಲ್ಲಿ ಹಾಗೂ ಹೆಚ್ಚು ಖರ್ಚಿಲ್ಲದ, ನ್ಯಾಯದಾನ ಪ್ರಕ್ರಿಯೆಯನ್ನು ಈ ಕಾನೂನು ಒದಗಿಸುತ್ತದೆ. ಸರ್ಕಾರದಿಂದ ವೃದ್ಧಾಶ್ರಮಗಳನ್ನು ತೆರೆಯುವ ಅಗತ್ಯದ ಬಗ್ಗೆಯೂ ಈ ಕಾನೂನು ಸೂಚಿಸುತ್ತದೆ.

**ಈ ಕಾನೂನಿನಲ್ಲಿ**

1. ಪಾಲಕರು/ಪೋಷಕರು ಎಂದರೆ – ತಂದೆ ಅಥವಾ ತಾಯಿ: ಸ್ವಂತ ಅಥವಾ ದತ್ತು ಅಥವಾ ಮಲ ತಂದೆ –ತಾಯಿ ಸಹ ಆಗಿರಬಹುದು; (60 ವರ್ಷ ತುಂಬದೆಯೂ ಇರಬಹುದು.)
2. ಹಿರಿಯ ನಾಗರೀಕ ಎಂದರೆ –60 ಹಾಗೂ 60 ವರ್ಷಕ್ಕೂ ಹೆಚ್ಚು ವಯಸ್ಸಾದ ಭಾರತೀಯ ಪ್ರಜೆ
3. ಮಕ್ಕಳು ಎಂದರೆ – ವಯಸ್ಕ ಮಗ, ಮಗಳು, ಮೊಮ್ಮಗ, ಮೊಮ್ಮಗಳು.
4. ಸಂಬಂಧಿ ಎಂದರೆ – ಮಕ್ಕಳಿಲ್ಲದ ಹಿರಿಯ ನಾಗರೀಕರ ಆಸ್ತಿಯ ಸ್ವಾಧೀನತೆ ಹೊಂದಿರುವ ಅಥವಾ ಅವರ ಮರಣಾನಂತರ ಅವರ ಆಸ್ತಿಯನ್ನು ಪಡೆಯುವ ಹಕ್ಕಿರುವ ವಯಸ್ಕ ಕಾನೂನುಬದ್ಧ ವಾರಸುದಾರರು.

**ಟ್ರಿಬ್ಯುನಲ್ / ನ್ಯಾಯಮಂಡಳಿ:** ಈ ಕಾನೂನಿನಲ್ಲಿ ಹಿರಿಯ ನಾಗರೀಕರಿಗೆ ಪೋಷಣಾ ಭತ್ಯೆಯನ್ನು ಅಥವಾ ಸಂರಕ್ಷಣೆಯನ್ನು ಅಥವಾ ಆಸ್ತಿ ರಕ್ಷಣೆ ಬಗ್ಗೆ ಆದೇಶವನ್ನು ಹೊರಡಿಸಲು ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ನಿರ್ವಹಣಾ ನ್ಯಾಯಮಂಡಳಿಯನ್ನು ರಚಿಸಲಾಗಿದೆ

ನಿರ್ವಹಣೆ ಎಂದರೆ– ಆಹಾರ, ಬಟ್ಟೆ, ವಸತಿ ಹಾಗೂ ವೈದ್ಯಕೀಯ ಶುಶ್ರೂಷೆ ಹಾಗೂ ಪಾಲನೆ ಎಂದರ್ಥ. ಯಾವುದೇ ಹಿರಿಯ ನಾಗರೀಕರು ಅಥವಾ ಪಾಲಕರು ತಮ್ಮ ಸಂಪಾದನೆಯಿಂದ ಅಥವಾ ತಮ್ಮ ಆಸ್ತಿಯಿಂದ ತಮ್ಮನ್ನು ತಾವೇ ಪೋಷಿಸಿಕೊಳ್ಳಲು ಆಗದೇ ಇದ್ದಲ್ಲಿ ಅಂತಹವರು ಪೋಷಣಾ ಭತ್ಯೆಗಾಗಿ ಅರ್ಹರು

### ಅರ್ಜಿಯನ್ನು ಯಾರು ಸಲ್ಲಿಸಬಹುದು

ಪಾಲಕರು ಅಥವಾ ಹಿರಿಯ ನಾಗರೀಕರು

ಪಾಲಕರು ಅಥವಾ ಹಿರಿಯ ನಾಗರೀಕರು ಇವರಿಂದ ನಾಮನಿರ್ದೇಶನಗೊಂಡ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ

ಮಂಡಳಿಯು ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳಬಹುದಾಗಿದೆ

**ಕಾಲಮಿತಿ:–** ಈ ಕಾನೂನಿನಡಿಯಲ್ಲಿ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ 90 ದಿನಗಳ ಒಳಗಾಗಿ ಪಾಲಕರ ಅಥವಾ ಹಿರಿಯ ನಾಗರೀಕರ ಅರ್ಜಿಯನ್ನು ತೀರ್ಮಾನ ಮಾಡಬೇಕಾಗುತ್ತದೆ.

**ಪೋಷಣಾ ಭತ್ಯೆ ಮೊತ್ತ:–** ಗರಿಷ್ಠ ಮೊತ್ತ ತಿಂಗಳಿಗೆ 10,000/– ರೂಪಾಯಿಗಳು.

**ಆದೇಶದ ಜಾರಿ/ಉಲ್ಲಂಘನೆ:–** ನಿರ್ವಹಣಾ ಮಂಡಳಿ ಆದೇಶವು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 125ರಲ್ಲಿ ಮಾಡಲಾದ ಆದೇಶದಂತೆ ಜಾರಿ ಮಾಡಬಹುದಾಗಿದೆ. ಮಂಡಳಿಯ ಆದೇಶವನ್ನು ಉಲ್ಲಂಘಿಸಿದ ವ್ಯಕ್ತಿಗೆ ಒಂದು ತಿಂಗಳು ಜೈಲುವಾಸ ಮತ್ತು ನೀಡಬೇಕಾಗಿರುವ ಮೊತ್ತಕ್ಕೆ ವಾರಂಟ್ ಜೊತೆಗೆ ದಂಡ ಸಹ ವಿಧಿಸಬಹುದಾಗಿದೆ.

**ಮೇಲ್ಮನವಿ: ನಿರ್ವಹಣಾ ಮಂಡಳಿಯ ಆದೇಶದ ವಿರುದ್ಧ ಕೇವಲ ಪಾಲಕರು ಅಥವಾ ಹಿರಿಯ ನಾಗರೀಕರು ಮಾತ್ರ ಮೇಲ್ಮನವಿ ಸಲ್ಲಿಸಬಹುದಾಗಿದೆ. ಎದುರುಗಾರರಿಗೆ ಮೇಲ್ಮನವಿಯ ಹಕ್ಕನ್ನು ನೀಡಲಾಗಿಲ್ಲ. ಮೇಲ್ಮನವಿ ಮಂಡಳಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ಸ್ಥಾಪಿತವಾಗಿದೆ. 60 ದಿವಸಗಳ ಒಳಗಾಗಿ ಮೇಲ್ಮನವಿ ಸಲ್ಲಿಸಬಹುದು.**

**ಹಿರಿಯ ನಾಗರೀಕರ ಆಸ್ತಿಯ ರಕ್ಷಣೆ:**

ಒಂದು ವೇಳೆ ಹಿರಿಯ ನಾಗರೀಕರು ತಮ್ಮನ್ನು ಪಾಲನೆ ಪೋಷಣೆ ಮಾಡುವ ಶರತ್ತಿನ ಮೇಲೆ ತಮ್ಮ ಆಸ್ತಿಯನ್ನು ವರ್ಗಾವಣೆ ಮಾಡಿದ್ದಲ್ಲಿ ಹಾಗೂ ಅಂತಹ ಆಸ್ತಿಯನ್ನು ಪಡೆದುಕೊಂಡ ವ್ಯಕ್ತಿಯು ಆ ಹಿರಿಯ ನಾಗರೀಕರ ಪಾಲನೆ ಪೋಷಣೆ ಮಾಡುವುದನ್ನು ನಿಲ್ಲಿಸಿದಲ್ಲಿ ಅಥವಾ ಅವರನ್ನು ನಿರ್ಲಕ್ಷಿಸಿದಲ್ಲಿ. ಆಸ್ತಿಯ ವರ್ಗಾವಣೆಯು ಮೋಸದಿಂದ/ ಬಲವಂತದಿಂದ ಅಥವಾ ಅನುಚಿತ ಪ್ರಭಾವದಿಂದ ಆದ ವರ್ಗಾವಣೆ ಎಂದು ಭಾವಿಸಲಾಗುತ್ತದೆ. ಅಷ್ಟೇ ಅಲ್ಲಾ ಅಂತಹ ವರ್ಗಾವಣೆಯನ್ನು ಮಂಡಳಿಯು ರದ್ದುಪಡಿಸಬಹುದು.

**ಅಪರಾಧ:** ತಮ್ಮ ಪಾಲನೆ–ಪೋಷಣೆಯಲಿರುವ ಹಿರಿಯ ನಾಗರೀಕರನ್ನು ಯಾವುದೇ ವ್ಯಕ್ತಿಯು ಅವರನ್ನು ತ್ಯಜಿಸುವ ಉದ್ದೇಶದಿಂದ ಮನೆ ಹೊರಗಡೆ ಕಳಿಸಿದಲ್ಲಿ ಅಂತಹವರಿಗೆ ಮೂರು ತಿಂಗಳ ಸೆರೆವಾಸ ಅಥವಾ ಐದು ಸಾವಿರ ರೂಪಾಯಿಗಳವರೆಗೆ ದಂಡ ಅಥವಾ ಎರಡನ್ನೋ ವಿಧಿಸಬಹುದಾಗಿದೆ. ಅಪರಾಧವು ಸಾಂಜ್ಞೇಯ ಅಪರಾಧವಾಗಿದ್ದು ಪೋಲೀಸರಿಗೆ ನೇರವಾಗಿ ದೂರು ಸಲ್ಲಿಸಬಹುದಾಗಿದೆ. ಪೋಲೀಸರು ಅಂತಹ ದೂರಿನ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳಬಹುದಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

1. ಲೀಗಲ್ ಸರ್ವೀಸ್ಸ್ ಕ್ಲಿನಿಕ್, ನಿಮ್ಹಾನ್ಸ್

   ದೂರವಾಣಿ ಸಂಖ್ಯೆ. - 080 26995743
2. ಕರ್ನಾಟಕ ರಾಜ್ಯ ಹಿರಿಯ ನಾಗರೀಕರ ಸಂಪನ್ಮೂಲ ಕೇಂದ್ರ, ನಿಮ್ಹಾನ್ಸ್–ಬೆಂಗಳೂರು.

   ದೂರವಾಣಿ ಸಂಖ್ಯೆ. - 080 26995593

   Email: seniorcitizens.nimhans@gmail.com